# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 547 |
| 2) ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) |
| 3) ಉತ್ತರಿಸುವ ದಿನಾಂಕ | : | 13.12.2018 |
| 4) ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯ ಮಂತ್ರಿಗಳು. |

| | ಪ್ರಶ್ನೆ | ಉತ್ತರ |
|---|---|---|
| (ಅ) | 2017-18ರಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; ಕೈಗೊಂಡಿರುವ ಕಾಮಗಾರಿಗಳಾವುವು; ಖರ್ಚು ಮಾಡದೇ ಉಳಿದ ಅನುದಾನ ಎಷ್ಟು; (ವಿವರ ನೀಡುವುದು) | 2017-18ನೇ ಸಾಲಿನಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ.2000.00 ಲಕ್ಷಗಳನ್ನು ಒದಗಿಸಲಾಗಿತ್ತು, ಈ ಪೈಕಿ ರೂ.1586.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ.1576.66 ಲಕ್ಷಗಳನ್ನು ಖರ್ಚು ಮಾಡಿದ್ದು, ರೂ.9.34 ಲಕ್ಷಗಳು ಉಳಿದಿರುತ್ತದೆ.<br>2017-18ನೇ ಸಾಲಿನಲ್ಲಿ ಕೈಗೊಂಡಿರುವ 305 ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| (ಆ) | ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಪೂರ್ಣ ಪ್ರಮಾಣದ ಕಾರ್ಯದರ್ಶಿ ನೇಮಕವಿಲ್ಲದೇ ಕಾಮಗಾರಿಗಳು ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಪೂರ್ಣ ಪ್ರಮಾಣದ ಕಾರ್ಯದರ್ಶಿಯನ್ನು ದಿನಾಂಕ:19.08.2015ರಂದು ನೇಮಕ ಮಾಡಲಾಗಿರುತ್ತದೆ. |
| (ಇ) | 2017-18ರಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರದಿಂದ ಯಾವ ಯಾವ ಜಿಲ್ಲೆಗೆ ಅನುದಾನ ಒದಗಿಸಲಾಗಿದೆ: (ಜಿಲ್ಲಾವಾರು ಅನುದಾನ ವಿವರ ನೀಡುವುದು) | ಅನುದಾನವನ್ನು ಜಿಲ್ಲಾವಾರು ವಿಂಗಡಿಸಿರುವುದಿಲ್ಲ. ಕಾಮಗಾರಿ ಮಂಜೂರಾತಿ ಆಧಾರದಲ್ಲಿ ಈ ಕೆಳಗಿನಂತೆ ಅನುದಾನ ಜಿಲ್ಲಾವಾರು ನಿಗಧಿಪಡಿಸಿದೆ;<br>(ರೂ.ಲಕ್ಷಗಳಲ್ಲಿ)<br>ಕ್ರ.ಸಂ / ಜಿಲ್ಲೆಯ ಹೆಸರು / ಮೀಸಲಿಟ್ಟ ಅನುದಾನ<br>1 / ದಕ್ಷಿಣ ಕನ್ನಡ ಜಿಲ್ಲೆ / 2361.69<br>2 / ಉಡುಪಿ ಜಿಲ್ಲೆ / 895.17<br>3 / ಉತ್ತರ ಕನ್ನಡ ಜಿಲ್ಲೆ / 1109.89<br>ಒಟ್ಟು / 4366.75 |
| (ಈ) | 2018-19ರಲ್ಲಿ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ; ಬಿಡುಗಡೆಯಾದ ಅನುದಾನ ಎಷ್ಟು; ಮಂಜೂರುಗೊಳಿಸಿದ ಕಾಮಗಾರಿಗಳು ಎಷ್ಟು? (ವಿವರ ನೀಡುವುದು) | 2018-19ನೇ ಸಾಲಿನಲ್ಲಿ ರೂ.911.00 ಲಕ್ಷಗಳನ್ನು ಒದಗಿಸಲಾಗಿದ್ದು, ಈ ಪೈಕಿ 2 ಕಂತುಗಳಾಗಿ ರೂ.455.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br>2018-19ನೇ ಸಾಲಿನಲ್ಲಿ ಯಾವುದೇ ಹೊಸ ಕಾಮಗಾರಿಗಳು ಮಂಜೂರಾಗಿರುವುದಿಲ್ಲ. ಕಾರಣ 2017-18ನೇ ಸಾಲಿನಲ್ಲಿ ಒಟ್ಟು ರೂ.4366.75 ಲಕ್ಷಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದ್ದು, ಉಳಿದ ರೂ. 2366.75 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ:ಯೋಇ 65 ಪಿಟಿಪಿ 2018

(ಹೆಚ್.ಡಿ. ಕುಮಾರ ಸ್ವಾಮಿ)
ಮುಖ್ಯ ಮಂತ್ರಿ

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:547ರ ಅನುಬಂಧ

| ಕ್ರಮ ಸಂಖ್ಯೆ | ಕಾಮಗಾರಿಗಳ ಹೆಸರು | ಒಟ್ಟು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1 | ರಸ್ತೆ ನಿರ್ಮಾಣ | 96 | 1633.42 |
| 2 | ತಡೆಗೋಡೆ ನಿರ್ಮಾಣ | 1 | 8.00 |
| 3 | ಕಾಲು ಸಂಕ / ಸಣ್ಣ ಸೇತುವೆ | 159 | 1640.02 |
| 4 | ಮೀನು ಮಾರುಕಟ್ಟೆ | 17 | 696.30 |
| 5 | ತೂಗುಸೇತುವೆ | 0 | – |
| 6 | ಉದ್ಯಾನವನ | 3 | 53.00 |
| 7 | ಕಿಂಡಿ ಅಣೆಕಟ್ಟು | 7 | 173.00 |
| 8 | ಶಾಲಾ ಕಟ್ಟಡ / ಮೈದಾನ ಅಭಿವೃದ್ಧಿ | 2 | 71.01 |
| 9 | ಬಸ್ಸು ತಂಗುದಾಣ | 2 | 10.00 |
| 10 | ವಾಣಿಜ್ಯ ಸಂಕೀರ್ಣ | 0 | 0.00 |
| 11 | ಶಾಲಾ ಪೀಠೋಪಕರಣ ಖರೀದಿ | 0 | 0.00 |
| 12 | ಸಮುದಾಯ ಭವನ | 18 | 82.00 |
| | **ಒಟ್ಟು** | **305** | **4366.75** |

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 547ಕ್ಕೆ ಪೂರಕ ಟಿಪ್ಪಣಿ:**

ಕರಾವಳಿ ತೀರದ ಮೂರು ಜಿಲ್ಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಾಗೂ ಸ್ಥಳೀಯ ಸಮಸ್ಯೆಗಳಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸುವ ನಿಟ್ಟಿನಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 582 ಅಪ್ರಾ 2008, ದಿನಾಂಕ: 08.09.2008ರನ್ವಯ ರಚಿಸಲಾಯಿತು.

ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದಾಗ ಅದರ ಪ್ರಕಾರ್ಯವು ಈ ಕೆಳಕಂಡಂತಿತ್ತು:

1. ಸಾರ್ವಜನಿಕ – ಖಾಸಗಿ ಪಾಲುದಾರಿಕೆಯೊಂದಿಗೆ ಈ ಕೆಳಕಂಡಂತೆ ಮೂಲಭೂತ ಸೌಲಭ್ಯಗಳ ಯೋಜನೆಗಳನ್ನು ರೂಪಿಸಲು ಸಲಹೆ ಸೂಚನೆಗಳನ್ನು ನೀಡುವುದು.
   i. ಮೇಲು ಸೇತುವೆ, ರಸ್ತೆ, ಪ್ರವಾಸೋದ್ಯಮ, ಬಂದರು, ಕೈಗಾರಿಕೆ ಮತ್ತು ತಂತ್ರಜ್ಞಾನ ಪಾರ್ಕ್‌ಗಳನ್ನು ಸಾರ್ವಜನಿಕ – ಖಾಸಗಿ ಪಾಲುದಾರಿಕೆಯೊಂದಿಗೆ ಕಾರ್ಯಸಾಧ್ಯವಾದ ಯೋಜನೆಗಳನ್ನು ಗುರುತಿಸುವುದು.
   ii. ಸಂಬಂಧಿತ ಆಡಳಿತ ಇಲಾಖೆಗಳ ಸಮಾಲೋಚನೆಯೊಂದಿಗೆ ಕೈಗೊಳ್ಳಬಹುದಾದ ಯೋಜನೆಗಳ ವರದಿಗಳನ್ನು ತಯಾರಿಸುವುದು.
   iii. ಯೋಜನೆಗಳ ಸಂಪೂರ್ಣ ವರದಿಗಳನ್ನು (Detail Project Report)ತಯಾರಿಸಲು ಅನುವು ಮಾಡುವುದು.

2. ತಾಂತ್ರಿಕ–ಆರ್ಥಿಕ ಚಟುವಟಿಕೆಗಳಲ್ಲಿನ ಅಭಿವೃದ್ಧಿ ಸಾಮರ್ಥ್ಯವನ್ನು ಗುರುತಿಸುವುದು ಮತ್ತು ಇಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ರಾಜ್ಯ ಸರ್ಕಾರಕ್ಕೆ ಸಲಹೆಗಳನ್ನು ನೀಡುವುದು.

3. ಕರಾವಳಿ ವಲಯಗಳನ್ನು ಸಂರಕ್ಷಿಸಲು ಮತ್ತು ಅಭಿವೃದ್ಧಿಗೊಳಿಸಲು ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳನ್ನು ರೂಪಿಸುವುದು.

4. ಕರಾವಳಿ ಸಂರಕ್ಷಣೆ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಸಮಯಾಧಾರಿತ ಉಸ್ತುವಾರಿ ಕ್ರಮ ಕೈಗೊಳ್ಳುವುದು.

2015–16ನೇ ಆರ್ಥಿಕ ವರ್ಷದಿಂದ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ವಿವಿಧ ಅನುಷ್ಠಾನ ಇಲಾಖೆ/ಏಜೆನ್ಸಿಗಳ ಮೂಲಕ ಅನುಷ್ಠಾನಗೊಳಿಸಲು ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಅವಕಾಶ ಕಲ್ಪಿಸಲಾಯಿತು:–

1. ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಧನಸಹಾಯ ಮಂಜೂರು ಮಾಡುವುದು, ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ನಗರ / ಗ್ರಾಮಿಣ ಸ್ಥಳೀಯ ಸಂಸ್ಥೆಗಳ ವಾಣಿಜ್ಯ ಕಟ್ಟಡಗಳ ನಿರ್ಮಾಣಕ್ಕೆ ಧನಸಹಾಯ ಮಂಜೂರು ಮಾಡುವುದು ಮತ್ತು ಸಂಪನ್ಮೂಲ ಕ್ರೋಢೀಕರಿಸುವುದು.

2. ಕರಾವಳಿ ಜಿಲ್ಲೆಗಳಲ್ಲಿ ರಸ್ತೆ ಸಂಪರ್ಕವಿಲ್ಲದ ಪ್ರದೇಶಗಳಿಗೆ ರಸ್ತೆ ನಿರ್ಮಿಸುವುದು.

3. ಪ್ರವಾಸೋದ್ಯಮ ಇಲಾಖೆಯು ಅಭಿವೃದ್ಧಿಪಡಿಸದೆ ಇರುವಂತಹ ಐತಿಹಾಸಿಕ ಹಾಗೂ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸುವುದು.

4. ಸರ್ಕಾರದ ಇತರೆ ಯೋಜನೆಗಳ ಅಡಿಯಲ್ಲಿ ಕೈಗೊಳ್ಳದೆ ಇರುವಂತಹ ಉಳಿದ ಯೋಜನೆಗಳು ಆದರೆ, ಯಾವುದೇ ವೈಯಕ್ತಿಕ ಲಾಭಗಳನ್ನು ಒಳಗೊಂಡ ಫಲಾನುಭವಿ ಆಧಾರಿತ ಯೋಜನೆಗಳನ್ನು ಕೈಗೊಳ್ಳತಕ್ಕದಲ್ಲ.

ಪ್ರಾಧಿಕಾರವು ರಚನೆಯಾದಾಗಿನಿಂದ 2018-19ನೇ ಸಾಲಿನವರೆಗೆ ಪ್ರಾಧಿಕಾರಕ್ಕೆ ಒದಗಿಸಿದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಖರ್ಚಾದ ಅನುದಾನ ವಿವರಗಳು ಈ ಕೆಳಕಂಡಂತಿವೆ:

(ರೂ.ಲಕ್ಷಗಳಲ್ಲಿ)

| ಆರ್ಥಿಕ ವರ್ಷ | ಆಯವ್ಯದಯದಲ್ಲಿ ಒದಗಿಸಿದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚು |
|---|---|---|---|
| 2009-10 | 100.00 | 100.00 | 37.10 |
| 2010-11 | 300.00 | 150.00 | 126.00 |
| 2011-12 | 300.00 | 150.00 | 117.00 |
| 2012-13 | 1000.00 | 250.00 | 106.00 |
| 2013-14 | 100.00 | 50.00 | 45.60 |
| 2014-15 | 100.00 | 54.20 | 40.60 |
| 2015-16 | 1000.00 | 1000.00 | 993.00 |
| 2016-17 | 1500.00 | 1500.00 | 1206.00 |
| 2017-18 | 2000.00 | 1586.00 | 1576.66 |
| 2018-19 | 911.00 | 455.50 | 241.80 |

2017-18ನೇ ಸಾಲಿನಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಆಯವ್ಯಯದಲ್ಲಿ ರೂ.2000.00 ಲಕ್ಷಗಳನ್ನು ಒದಗಿಸಲಾಗಿತ್ತು. ಈ ಪೈಕಿ ರೂ.1586.00 ಲಕ್ಷಗಳು ಮಾತ್ರ ಬಿಡುಗಡೆ ಮಾಡಿದ್ದು, ರೂ.1576.66 ಲಕ್ಷಗಳು ಖರ್ಚಾಗಿರುತ್ತದೆ.

2017-18 ನೇ ಸಾಲಿನಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಒಟ್ಟು ರೂ.4366.75 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಗಳು ಅನುಮೋದನೆಯಾಗಿರುತ್ತದೆ. ಮಂಜೂರಾದ 305 ಕಾಮಗಾರಿಗಳಲ್ಲಿ 135 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಉಳಿದ ಕಾಮಗಾರಿಗಳನ್ನು 2018-19ನೇ ಸಾಲಿನಲ್ಲಿ ನಿಗಧಿಪಡಿಸಲಾದ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.

ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ 2017-18ನೇ ಸಾಲಿನಲ್ಲಿ ಒದಗಿಸಿದ್ದ ಅನುದಾನ ರೂ.2000.00 ಲಕ್ಷಗಳನ್ನು ಹೊರತುಪಡಿಸಿ, ಸರ್ಕಾರದಿಂದ ರೂ.2483.75 ಲಕ್ಷಗಳ ಹೆಚ್ಚುವರಿ ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಂತೆ ಪ್ರಾಧಿಕಾರಕ್ಕೆ ಸರ್ಕಾರದ ಆದೇಶದ ಸಂಖ್ಯೆ: ಯೋಇ 75 ಪಿಟಿಪಿ 2017, ದಿನಾಂಕ:21.06.2017, 22.06.2017, 13.07.2017, 09.08.2017, 18.08.2017 ಮತ್ತು 01.09.2017 ಹಾಗೂ ಸರ್ಕಾರದ ಪತ್ರ ಸಂಖ್ಯೆ:ಯೋಇ 18 ಪಿಟಿಪಿ 2017, ದಿನಾಂಕ:19.07.2017 ಮತ್ತು 21.08.2017 ಹಾಗೂ ಸರ್ಕಾರದ ಆದೇಶದ ಸಂಖ್ಯೆ: ಯೋಇ 75 ಪಿಟಿಪಿ 2017, ದಿನಾಂಕ:23.12.2017, 27.12.2017, 18.01.2018, 27.01.2018 16.02.2018 ಮತ್ತು 08.03.2018-ಇವುಗಳಲ್ಲಿ ತಿಳಿಸಲಾಗಿದೆ.

2017-18ನೇ ಸಾಲಿನ ಒದಗಿಸಿದ್ದ, ರೂ.2000.00 ಲಕ್ಷಗಳಲ್ಲಿ ರೂ.117.00 ಲಕ್ಷಗಳನ್ನು ಆಡಳಿತಾತ್ಮಕ ವೆಚ್ಚಕ್ಕಾಗಿ ಉಪಯೋಗಿಸಿಕೊಳ್ಳಾಗಿದೆ.

2018-19ನೇ ಸಾಲಿನ ಆಯವ್ಯಯದಲ್ಲಿ ರೂ.911.00 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಇದುವರೆಗೆ ರೂ.455.50 ಲಕ್ಷಗಳು ಬಿಡುಗಡೆಯಾಗಿದ್ದು, ಸದರಿ ನಿಗಧಿಪಡಿಸಿದ ಅನುದಾನದಲ್ಲಿ 2017-18ನೇ ಸಾಲಿನಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗಿದ್ದು, 2017-18ನೇ ಸಾಲಿನ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ ರೂ. 2000.00 ಲಕ್ಷಗಳು ಅನುದಾನದ ಅವಶ್ಯಕತೆ ಇರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂ.2361.69 ಲಕ್ಷ, ಉಡುಪಿ ಜಿಲ್ಲೆಯಲ್ಲಿ ರೂ.895.17 ಲಕ್ಷ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ರೂ. 1109.89 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ದಿನಾಂಕ:19.08.2015 ರಿಂದ ಜಾರಿಗೆ ಬರುವಂತೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಪೂರ್ಣ ಪ್ರಮಾಣದ ಕಾರ್ಯದರ್ಶಿಯವರನ್ನು ನಿಯೋಜಿಸಲಾಗಿರುತ್ತದೆ.

***